31 December 2025

Belagavi

# Jamborette Waves
ಜಾಂಬೊರೆಟ್ ವೇವ್ಸ್

The official Newspaper of 29th Karnataka State Jamborette

Powered By Scouting Waves

Vol: 01 | Issue: 05 | Pages: 08

| | | | | | |
|---|---|---|---|---|---|
| Jamborette Voice | 07 | ಶೈಕ್ಷಣಿಕ ಪ್ರವಾಸ | 02 | Physical Display | 04 |

## ಜಾಂಬೋರೇಟ್‌ನಲ್ಲಿ ಅಗ್ನಿಶಾಮಕ ದಳದಿಂದ ಪ್ರಾತ್ಯಕ್ಷಿಕೆ

### ಪ್ರಾತ್ಯಕ್ಷಿಕೆಯಲ್ಲಿ ಅಗ್ನಿ ನಂದಿಸುವ ವಿವಿಧ ವಿಧಾನ ಹಾಗೂ ಉಪಕರಣಗಳ ಬಗ್ಗೆ ಮಾಹಿತಿ







**ಬೆಳಗಾವಿ ಡಿ. 30:** ರಾಜ್ಯ ಜಾಂಬೋರೇಟ್ನಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ದಳದವರು ಅಗ್ನಿ ಅವಘಡಗಳನ್ನು ಎದುರಿಸುವ ವಿವಿಧ ವಿಧಾನಗಳ ಕುರಿತು ಪ್ರಾತ್ಯಕ್ಷಿಕೆಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಪಿ.ಜಿ.ಆರ್. ಸಿಂಧ್ಯಾ ಅವರು ಅಗ್ನಿ ನಂದಿಸುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಅಗ್ನಿಶಾಮಕ ದಳದ ಕಾರ್ಯವನ್ನು ಶ್ಲಾಘಿಸಿ, ಕೇವಲ ಬೆಂಕಿ ನಂದಿಸುವುದಲ್ಲದೆ ತುರ್ತು ಸಂದರ್ಭಗಳಲ್ಲಿ ಜನರ ಪ್ರಾಣ ಹಾಗೂ ಆಸ್ತಿ ರಕ್ಷಣೆ ಮಾಡುವುದು ದಳದ ಪ್ರಮುಖ ಕರ್ತವ್ಯ ಎಂದು ಹೇಳಿದರು.

ರಂಗನಾಥ್ ರಾಠೋಡ್ ಡಿಎಫ್ಓ ಬೆಳಗಾವಿ ಅವರು ಅಗ್ನಿಶಾಮಕ ಸೇವೆಯ ಇತಿಹಾಸವನ್ನು ವಿವರಿಸಿ, 1942ರಲ್ಲಿ ಬೆಂಗಳೂರಿನಲ್ಲಿ ಪ್ರಥಮ ಅಗ್ನಿಶಾಮಕ ಸೇವೆ ಆರಂಭಗೊಂಡಿದ್ದು, 2004ರಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಾಗಿ ವಿಸ್ತರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪ್ರಾತ್ಯಕ್ಷಿಕೆಯಲ್ಲಿ ಸೋಡಿಯಂ ಬೈ-ಕಾರ್ಬೋನೇಟ್, ಕಾರ್ಬನ್ ಡೈಆಕ್ಸೈಡ್, ಬ್ಲ್ಯಾಂಕೆಟಿಂಗ್, ಬೀಟಿಂಗ್ ಸೇರಿದಂತೆ ವಿವಿಧ ಅಗ್ನಿ ನಂದಿಸುವ ವಿಧಾನಗಳು ಹಾಗೂ ಪೈಪ್ ಉಪಕರಣಗಳ ಬಗ್ಗೆ ಮಾಹಿತಿ ನೀಡಲಾಯಿತು.

## ಏಕತೆ ಹಾಗೂ ಸಹೋದರತ್ವದ ಸಂದೇಶ ಸಾರಿದ ಭವ್ಯ ಶಿಬಿರಾಗ್ನಿ

**ಬೆಳಗಾವಿ ಡಿ. 30:** 29ನೇ ಕರ್ನಾಟಕ ರಾಜ್ಯ ಜಂಬೋರೇಟ್ ಕಾರ್ಯಕ್ರಮದ ಅಂಗವಾಗಿ ಭವ್ಯ ಹಾಗೂ ಅರ್ಥಪೂರ್ಣ ಶಿಬಿರಾಗ್ನಿ ಕಾರ್ಯಕ್ರಮವನ್ನು ಸಡಗರ ಸಂಭ್ರಮದಿಂದ ಆಯೋಜಿಸಲಾಯಿತು. ಶಿಬಿರಾಗ್ನಿಯ ಉದ್ಘಾಟನೆಗೂ ಮುನ್ನ ನಾಲ್ಕು ದಿಕ್ಕಿನಿಂದ ಸಂದೇಶಗಳನ್ನು ಹೊತ್ತು ತಂದ ದೂತರು ವೇದಿಕೆಗೆ ಆಗಮಿಸಿ ಏಕತೆ, ಶಾಂತಿ ಹಾಗೂ ಸೇವೆಯ ಸಂದೇಶವನ್ನು ಸಾರಿದರು. ಬಳಿಕ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರು ಶಿಬಿರಾಗ್ನಿಯನ್ನು ಉದ್ಘಾಟಿಸುವ ಮೂಲಕ ಕಾರ್ಯಕ್ರಮಕ್ಕೆ ವಿಶೇಷ ಮಹತ್ವ ನೀಡಿದರು.

ಶಿಬಿರಾಗ್ನಿ ಗೀತೆಯೊಂದಿಗೆ ಆರಂಭವಾದ ಶುಭ್ರಾಗ್ನಿ ಕಾರ್ಯಕ್ರಮಗಳು ಮೈದಾನದಲ್ಲಿ ನೆರೆದಿದ್ದ ಸ್ಕೌಟ್-ಗೈಡ್ ಮಕ್ಕಳು ಹಾಗೂ ಪ್ರೇಕ್ಷರಲ್ಲಿ ಅಪಾರ ಉತ್ಸಾಹ ಮತ್ತು ಉಲ್ಲಾಸವನ್ನು ಮೂಡಿಸಿತು.

ಶಿಬಿರಾಗ್ನಿಯ ಜ್ವಾಲೆಯ ಸುತ್ತ ಸೇರಿ ನಡೆದ ಕಾರ್ಯಕ್ರಮಗಳು ಶಿಸ್ತು, ಸಹಬಾಳ್ವೆ ಮತ್ತು ಸಾಂಸ್ಕೃತಿಕ ವೈಭವದ ಜೀವಂತ ಪ್ರತೀಕವಾಗಿ ಮೂಡಿಬಂದವು.



ಈ ಸಂದರ್ಭದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ಕಲಾವಿದರು ಕರ್ನಾಟಕದ ಸಮೃದ್ಧ ಜನಪದ ಪರಂಪರೆಯನ್ನು ಪ್ರತಿಬಿಂಬಿಸುವ ವೈವಿಧ್ಯಮಯ ನೃತ್ಯ ಹಾಗೂ ಪ್ರದರ್ಶನಗಳನ್ನು ನೀಡಿದರು. ದಕ್ಷಿಣ ಕನ್ನಡ ಜಿಲ್ಲೆಯವರಿಂದ ತುಳುನಾಡ ವೈಭವ ಪ್ರದರ್ಶನ ಮನಸೆಳೆಯಿತು. ಕಲಬುರಗಿ ಜಿಲ್ಲೆಯವರಿಂದ ಕಂಸಾಳೆ ನೃತ್ಯ ತನ್ನ ಶಕ್ತಿಶಾಲಿ ಲಯ ಮತ್ತು ಶಿಸ್ತಿನಿಂದ ಪ್ರೇಕ್ಷರ ಮೆಚ್ಚುಗೆಗೆ ಪಾತ್ರವಾಯಿತು. ಕೊಪ್ಪಳ ಜಿಲ್ಲೆಯವರಿಂದ ಪಿರಮಿಡ್ ಪ್ರದರ್ಶನ ಸಾಹಸ ಮತ್ತು ತಂಡಭಾವನೆಯನ್ನು ವ್ಯಕ್ತಪಡಿಸಿತು. ಶಿವಮೊಗ್ಗ ಜಿಲ್ಲೆಯವರಿಂದ ಕೋಲಾಟ ನೃತ್ಯ ಸಾಂಪ್ರದಾಯಿಕ ಸೊಬಗನ್ನು ಮೆರೆದರೆ, ವಿಜಯನಗರ ಜಿಲ್ಲೆಯವರಿಂದ ಲಂಬಾಣಿ ವೃತ್ತಿ ನೃತ್ಯ ಬಣ್ಣಬಣ್ಣದ ವೇಷಭೂಷಣ ಮತ್ತು ಚೈತನ್ಯದಿಂದ ಎಲ್ಲರ ಗಮನ ಸೆಳೆಯಿತು.

ಶಿಬಿರಾಗ್ನಿ ಕಾರ್ಯಕ್ರಮವು ಕೇವಲ ಸಾಂಸ್ಕೃತಿಕ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗದೆ, ರಾಜ್ಯದ ವಿವಿಧ ಭಾಗಗಳ ಸ್ಕೌಟ್-ಗೈಡ್ ಮಕ್ಕಳು ಒಂದೇ ವೇದಿಕೆಯಲ್ಲಿ ಸೇರಿ ಪರಸ್ಪರ ಸಂಸ್ಕೃತಿಯನ್ನು ಅರಿತುಕೊಳ್ಳುವ ಹಾಗೂ ಸ್ನೇಹಬಾಂಧವ್ಯ ಬೆಳೆಸುವ ಮಹತ್ವದ ವೇದಿಕೆಯಾಗಿತ್ತು. ಈ ಭವ್ಯ ಶಿಬಿರಾಗ್ನಿ ಕಾರ್ಯಕ್ರಮ ಕರ್ನಾಟಕದ ಸಾಂಸ್ಕೃತಿಕ ಏಕತೆ, ಪರಂಪರೆ ಮತ್ತು ಸಹೋದರತ್ವವನ್ನು ಪ್ರತಿಬಿಂಬಿಸುವ ಸ್ಮರಣೀಯ ಕ್ಷಣವಾಗಿ ಜಂಬೋರೇಟ್ ಇತಿಹಾಸದಲ್ಲಿ ಸ್ಥಾನ ಪಡೆದಿತು.







### ಡ್ರೋನ್ ಪ್ರದರ್ಶನ



**ರಾಜ್ಯ ಜಾಂಬೋರೇಟ್‌ನಲ್ಲಿ ಸಹಸ್ರಾರು ಮಕ್ಕಳ ಎದುರು ಆಕರ್ಷಣೀಯ ಡ್ರೋನ್ ಶೋ ನಡೆಯಿತು.**

# NAVIGATING THROUGH OBSTACLES: ADVENTURE VALLEY











The jamborette would indeed remain incomplete without challenges taking the form of an adventure valley. The adventure valley was located at the Rohideshwar Camp of the Maratha LIRC Division. The path of propagation through which young people had to successfully navigate as a constituent element of the adventure valley was the Kondhana Battle Obstacle Assault Course. This course was comprising plethora of physical activities which challenged the preparedness and tested the fitness of the participants which included but was not limited to Ladder Climbing, Cask Crawling, Bay Jumping and Tunnel Crawling. Everyone actively participated in the activities while understanding the importance of maintaining robust physical health in general. The adventure valley base can undoubtedly be deemed an incredible activity that would be cherished for the time to come.

# ಶೈಕ್ಷಣಿಕ ಪ್ರವಾಸ: ಜಾಂಬೋರೇಟ್ ಶಿಬಿರಾರ್ಥಿಗಳ ಜಾಲಿ ರೈಡ್

**ರಾಜ್ಯದ ವಿವಿಧ ಶೈಕ್ಷಣಿಕ ಜಿಲ್ಲಾ ಕೇಂದ್ರಗಳಿಂದ ಆಗಮಿಸಿರುವ ವಿದ್ಯಾರ್ಥಿಗಳು ಬೆಳಗಾವಿಯ ಸುಪ್ರಸಿದ್ಧ ತಾಣಗಳಿಗೆ ಶೈಕ್ಷಣಿಕ ಪ್ರವಾಸಗೈದು ಅಪೂರ್ವ ಅನುಭವದ ಸವಿಯುಂಡರು.**

**ಸುವರ್ಣಸೌಧ:** ಬೆಳಗಾವಿಯ ಸುವರ್ಣ ವಿಧಾನಸೌಧ ಈಗ ಕರ್ನಾಟಕದ ಎರಡನೇ ಶಕ್ತಿ ಕೇಂದ್ರವಾಗಿ ರೂಪುಗೊಂಡಿದೆ. ಪ್ರತಿ ವರ್ಷ ಕರ್ನಾಟಕ ವಿಧಾನ ಮಂಡಲದ ಚಳಿಗಾಲದ ಅಧಿವೇಶನಕ್ಕೆ ಬೆಳಗಾವಿಯ ಸುವರ್ಣ ವಿಧಾನಸೌಧ ಸಾಕ್ಷಿಯಾಗುತ್ತಿದೆ. ವಾರದ ಹಿಂದಷ್ಟೇ ಇಲ್ಲಿ ಈ ವರ್ಷದ ಚಳಿಗಾಲದ ಅಧಿವೇಶನ ಅತ್ಯಂತ ಯಶಸ್ವಿಯಾಗಿ ನಡೆದಿದೆ. ಬೆಂಗಳೂರು ವಿಧಾನಸೌಧದ ಪ್ರತಿರೂಪದಂತಿರುವ ಸುವರ್ಣ ವಿಧಾನಸೌಧದ ಸೌಂದರ್ಯಕ್ಕೆ ವಿದ್ಯಾರ್ಥಿಗಳು ಮಾರುಹೋದರು. ರಾಷ್ಟ್ರೀಯ ಹೆದ್ದಾರಿಯ ಸನಿಹ ಗುಡ್ಡದ ಮೇಲಿರುವ ಈ ಸುವರ್ಣ ವಿಧಾನಸೌಧ ದಶಕದಿಂದ ಈಚೆಗೆ ಬೆಳಗಾವಿಯ ಮತ್ತೊಂದು ಪ್ರಸಿದ್ಧ ಪ್ರವಾಸಿ ತಾಣವಾಗಿ ಗುರುತಿಸಿಕೊಳ್ಳುತ್ತಿದೆ. ವಿದ್ಯಾರ್ಥಿಗಳು ಸುವರ್ಣ ವಿಧಾನಸೌಧದ ಅಂದಕ್ಕೆ ಮೆಚ್ಚುಗೆ ಸೂಚಿಸಿದರು. ಬೆಂಗಳೂರಿನ ವಿಧಾನಸೌಧದ ಬಗ್ಗೆ ಕೇಳಿ ತಿಳಿದುಕೊಂಡಿದ್ದ ವಿದ್ಯಾರ್ಥಿಗಳು ಜನ ಜಂಗುಳಿ ಇಲ್ಲದ ಬೆಳಗಾವಿಯ ಸುವರ್ಣ ವಿಧಾನಸೌಧದ ಒಳಹೊಕ್ಕು ಸಂತಸಗೊಂಡರು. ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ.

**ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (VTU):** ಬೆಳಗಾವಿಯ ಶೈಕ್ಷಣಿಕ ಗರಿಮೆಯನ್ನು ಎತ್ತಿ ಹಿಡಿಯುವಲ್ಲಿ ವಿಟಿಯು ಪಾತ್ರ ದೊಡ್ಡದು. ನಗರದ ಹೊರವಲಯದಲ್ಲಿರುವ 'ಜ್ಞಾನ ಸಂಗಮ' ಆವರಣವು ರಾಜ್ಯದ ತಾಂತ್ರಿಕ ಶಿಕ್ಷಣದ ಕೇಂದ್ರಬಿಂದುವಾಗಿದೆ. ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಈ ವಿಶ್ವವಿದ್ಯಾಲಯವು ಇಂಜಿನಿಯರಿಂಗ್ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಜ್ಞಾನ ದೇಗುಲವಾಗಿದೆ.

ಹಸಿರು ಹೊದಿಕೆಯ ನಡುವೆ ಕಂಗೊಳಿಸುವ ಈ ಬೃಹತ್ ಕ್ಯಾಂಪಸ್‌ನ ಶಾಂತಿಯುತ ವಾತಾವರಣ ಮತ್ತು ಅಲ್ಲಿನ ಸುಸಜ್ಜಿತ ಕಟ್ಟಡಗಳು ವಿದ್ಯಾರ್ಥಿಗಳ ಗಮನ ಸೆಳೆದವು. ಮುಖ್ಯವಾಗಿ, ಇಲ್ಲಿನ ಭವ್ಯವಾದ ಆಡಳಿತ ಕಚೇರಿ ಮತ್ತು ಶೈಕ್ಷಣಿಕ ಶಿಸ್ತನ್ನು ಕಂಡು ವಿದ್ಯಾರ್ಥಿಗಳು ಪ್ರಭಾವಿತರಾದರು. ತಾಂತ್ರಿಕ ಲೋಕದ ಅಭಿವೃದ್ಧಿಗೆ ಬೆಳಗಾವಿ ಹೇಗೆ ಸಾಕ್ಷಿಯಾಗಿದೆ ಎಂಬುದನ್ನು ಇಲ್ಲಿನ ಸಂಶೋಧನಾ ಕೇಂದ್ರಗಳು ಮತ್ತು ಗ್ರಂಥಾಲಯಕ್ಕೆ ಭೇಟಿ ನೀಡಿದ ವಿದ್ಯಾರ್ಥಿಗಳು ಪ್ರತ್ಯಕ್ಷವಾಗಿ ಕಂಡು ಜ್ಞಾನವನ್ನು ವೃದ್ಧಿಸಿಕೊಂಡರು.




**ಕಿತ್ತೂರು ರಾಣಿ ಚನ್ನಮ್ಮ ಪ್ರಾಣಿ ಸಂಗ್ರಹಾಲಯ:** ಬೆಳಗಾವಿಯಿಂದ ಹೊನಗಾ ಗ್ರಾಮಕ್ಕೆ ತೆರಳುವ ಮಾರ್ಗ ಮಧ್ಯೆ ಭೂತರಾಮನ ಹಟ್ಟಿಯಲ್ಲಿ ಕಿತ್ತೂರು ರಾಣಿ ಚನ್ನಮ್ಮ ಪ್ರಾಣಿ ಸಂಗ್ರಹಾಲಯ ಖ್ಯಾತಿ ಪಡೆದುಕೊಂಡಿದೆ. ಇಲ್ಲಿರುವ ಅಪರೂಪದ ಪ್ರಾಣಿಗಳನ್ನು ವಿದ್ಯಾರ್ಥಿಗಳು ಅತ್ಯಂತ ಹತ್ತಿರದಿಂದ ಕಂಡು ಖುಷಿ ಪಟ್ಟರು. ಹಾವು ಪಾರ್ಕ್, ಮೊಸಳೆ ಹೊಂಡ, ಮ್ಯೂಸಿಯಂ-ಅಡಿಟೋರಿಯಂ, ಹೈವೇ ಐಕಾನ್ ಟವರ್ ಸೇರಿದಂತೆ ಹಲವು ಆಕರ್ಷಣೆಗಳು ಇಲ್ಲಿ ಕಂಡವು.







# VIBRANT CELEBRATION OF DISTRICT DAYS: PROJECTING CULTURAL DIVERSITY

**Belagavi:** The jamborette witnessed the vibrant celebration of differentiated district days organised with the objective of projecting the rich cultural heritage and diversity of their respective districts to everyone from across the state. The celebration was filled with energetic dance and melodious musical performances alongside addresses from the office bearers of the district highlighting the unique and distinctive characteristics of their respective districts. It created a platform for bridging the diversity across the districts and helping participants connect with each other from all across the state. Mouth watering food and warm hospitality in turn enhanced the joy of the celebration.



CHITRADURGA



SHIVAMOGGA

## KADALEKAI PARISHE



Tradition carried forward to Jamborette



SHIVAMOGGA




BENGALURU NORTH



BENGALURU NORTH

## Exploring Cultures: Visits to the District Stalls



**Belagavi:** A special zone of the jamborette was dedicated to exhibition stalls hosted by differentiated district associations which were in turn stalls embodying the district in general. The exhibition stalls helped derive an image and build a perspective on various districts while helping paint the picture of their culture, history, heritage, and food habits. Young people explained the significant monuments and distinctive characteristics of their district while also sharing some food for taste. The stall contributed towards building the exposure of participants and understanding the culture of the state at one place. It bridged cultural differences and brought together people reflecting diversity and inclusive nature of scouting and guiding.

## Learning to Observe & Protect our Feathered Friends



**Belagavi:** The activity base directly contributes towards the environmental sustainability commitment that is expected to be inculcated and actively implemented during and beyond the course of the jamborette. The station was inclined towards equipping young people with knowledge and awareness associated with the distinct types of birds, their diverse behaviours, structure while highlighting the lessons and innovations that are derived from them in specific. All the young people were urged to reconsider their lifestyle choices that would help generate a profound positive impact on conserving birds while aiding the maintenance of the fragile ecological balance.

## Breaking Down Sustainability: Starting Small




**Belagavi:** The Earth Tribe activity station involved a special session elucidating the concept of sustainability in a comprehendible manner while connecting the same to implementable examples witnessed in the daily lives of young people. Starting actions at the house and disseminating the best practices to the community was described as the most effective and efficient action plan for maximising contribution towards the achievement of sustainable development goals. Collecting data on species and the impact of human activities across designated time periods while formulating creative and innovative solutions to mitigate the negative consequences and conserve ecological balance was a key takeaway that is to be carried by scouts and guides.

## UNLEASHING FASCINATION: MAGIC SHOW

**Belagavi:** The activity base in turn drew considerable number of young people who were indeed fascinated by the magic tricks presented during the course of the magic show who thoroughly enjoyed every moment. Various magical tricks drew attention and applause of the participants which involved the use of various tools and items. The show was entertaining and engaging which saw some volunteers perform magic tricks alongside the magician and verifying the authenticity of the performance in specific. The magic show was special as scouts and guides were able to learn some basic magic tricks while being explained the method of performing magic which added to the interest and value of the activity.





## PHOTO FEATURE!






## ´ಅನುಭವ ಮಂಟಪ´ನಾಟಕ ಪ್ರದರ್ಶಿಸಿದ ರಂಗ ಸಾಮ್ರಾಟ

**ಬೆಳಗಾವಿ ಡಿ. 30:** 29ನೇ ಕರ್ನಾಟಕ ರಾಜ್ಯ ಜಂಬೂರೆಟ್ ಕಾರ್ಯಕ್ರಮದ ಅಂಗವಾಗಿ ಸಾಂಸ್ಕೃತಿಕ ವೇದಿಕೆಯಲ್ಲಿ ಸಿಕಂದರ್ ದಂಡಿನ ನಿರ್ದೇಶನದ 'ಅನುಭವ ಮಂಟಪ' ನಾಟಕ ಪ್ರದರ್ಶನ ಗಮನಸೆಳೆಯಿತು. ಬಾಳಪ್ಪ ಚಿನಗುಡಿ ರಚಿತ ಅಲ್ಲಮ ಪ್ರಭು ಹಾಗೂ ಬಸವಣ್ಣನವರ ಅನುಭವ ಮಂಟಪದ ಪರಿಕಲ್ಪನೆಯನ್ನು ಕೇಂದ್ರವಾಗಿಟ್ಟುಕೊಂಡ ಈ ನಾಟಕದಲ್ಲಿ ಶರಣ ಸಂಸ್ಕೃತಿ, ಸಾಮಾಜಿಕ ಸಮಾನತೆ ಮತ್ತು ಕಾಯಕ ತತ್ವವನ್ನು ಪರಿಣಾಮಕಾರಿಯಾಗಿ ನಿರೂಪಿಸಲಾಯಿತು. ಶಿವಶರಣರ ಕಾಯಕ, ವಚನಗಳ ಮೂಲಕ ಮಾನವೀಯ ಮೌಲ್ಯಗಳನ್ನು ಮನಮುಟ್ಟುವಂತೆ ತೋರಿಸಲಾಯಿತು.

ವೇದಿಕೆ ವಿನ್ಯಾಸ, ವೇಷಭೂಷಣ, ಬೆಳಕು ಮತ್ತು ಹಿನ್ನೆಲೆ ಸಂಗೀತ ನಾಟಕಕ್ಕೆ ಸೂಕ್ತವಾಗಿ ಹೊಂದಿಕೊಂಡಿದ್ದು, ಕಲಾವಿದರ ಶಿಸ್ತಿನ ಅಭಿನಯ ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಯಿತು. ಜಂಬೂರೆಟ್ ವೇದಿಕೆಯಲ್ಲಿ ನಡೆದ ಈ ತಾತ್ವಿಕ ನಾಟಕ ಪ್ರದರ್ಶನ ಶರಣರ ಆದರ್ಶಗಳನ್ನು ಇಂದಿನ ತಲೆಮಾರಿಗೆ ತಲುಪಿಸುವಲ್ಲಿ ಮಹತ್ವದ ಪಾತ್ರ ವಹಿಸಿತು.



## ಮಾದರಿ ಗ್ರಾಮ ಪಂಚಾಯತ್ ನಾಟಕಕ್ಕೆ ಜಾಂಬೋರೇಟ್ ಸಾಕ್ಷಿ

**ಬೆಳಗಾವಿ ಡಿ. 30:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಯೋಜಿಸಿದ್ದ ವಿಡಂಬನಾ ನಾಟಕ ´ಮಾದರಿ ಗ್ರಾಮ ಪಂಚಾಯತ್´ ಗೆ 29ನೇ ರಾಜ್ಯ ಜಾಂಬೊರೆಟ್ ಸಾಕ್ಷಿಯಾಯಿತು.

ಇದು ಗ್ರಾಮೀಣ ಭಾಗದ ಆಡಳಿತದಲ್ಲಿನ ಪರಿವರ್ತನೆಯನ್ನು ಪ್ರಕ್ಷೇಪಿಸುವ ಸಂದೇಶ ಸಾರಿತು. ಈ ಚಟುವಟಿಕೆಯಲ್ಲಿ ಸ್ಕೌಟ್-ಗೈಡ್‌ಗಳು ಮತ್ತು ಸ್ಕೌಟ್ ಮಾಸ್ಟರ್‌ಗಳು ಸಕ್ರಿಯ ಮತ್ತುಉತ್ಸಾಹಭರಿತವಾಗಿನಾಟಕವನ್ನುಕಣ್ತುಂಬಿಕೊಂಡರು. ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸುಧಾರಿಸುವ ಕುರಿತು ಮತ್ತು ಸಾಮಾನ್ಯವಾಗಿ ಯುವಜನರ ನಿರೀಕ್ಷೆಗಳನ್ನು ಪ್ರತಿಬಿಂಬಿಸುವ ಗುರಿಯನ್ನು ಹೊಂದಿರುವ ವಿಧಾನಗಳಿಂದ ರೂಪುಗೊಂಡ ವಿಶಿಷ್ಟ ಪ್ರಸ್ತುತಿಗಳನ್ನು ಪ್ರದರ್ಶಿಸಿದರು.

ಈ ಚಟುವಟಿಕೆಯು ಉತ್ತಮ ಜಗತ್ತನ್ನು ಸೃಷ್ಟಿಸಲು ಅಗತ್ಯವಿರುವ ಬದಲಾವಣೆಗಳನ್ನು ರೂಪಿಸಲು ಸಹಾಯ ಮಾಡುವ ಭರವಸೆಯನ್ನು ಹುಟ್ಟುಹಾಕಿತ್ತು ಮತ್ತು ಧನಾತ್ಮಕ ಪರಿಣಾಮದ ಮೇಲೆ ಪ್ರಭಾವ ಬೀರಲು ಮತ್ತು ಸಮಾಜದ ಎಲ್ಲಾ ಪಾಲುದಾರರ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಯುವಜನರ ಪ್ರಾಮುಖ್ಯತೆಯನ್ನು ಈ ಪ್ರಸ್ತುತಿ ಎತ್ತಿ ತೋರಿಸಿತು.



## A PHYSICAL DISPLAY FILLED WITH COLOURFUL EXTRAVAGANCE

**Belagavi:** The physical display activity was conducted at the jamborette arena which witnessed wide scale audience comprising all the participants while being inclined towards providing a visual treat resonating with the irrepressible energy of each district of the state. The young people provided astounding performances with commendable coordination and display of unity while projecting unique and distinctive themes. The usage of props and the music in turn elevated the standard while showcasing the creativity of the the scouts and guides which secured praise from the audience. The display will continue to be remembered for the time to come while being etched as a colourful extravagance of the jamborette.

The use of props and music added an extra layer of wow, highlighting the Scouts' and Guides' creativity. It was a visual treat that left the audience cheering! The event was a true celebration of Karnataka's vibrant youth!





# VIEWING JAMBORETTE THROUGH THE LENS

## SCOUT SKILLS





## FUN BASE





## FUN IN FARM: TUG OF MUD



## FLAGGING OFF The NIGHT HIKE



## FROM AROUND THE JAMBORETTE




## GET REAL TIME UPDATES ON SOCIAL MEDIA!

Instagram Facebook Youtube

29TH KARNATAKA STATE JAMBORETTE

## HAPPY BIRTHDAY!



ಜಾಂಬೋರೇಟ್ ಸಮಯದಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡ ಶಿಬಿರಾರ್ಥಿಗಳೆಲ್ಲರೂ ಅರೇನಾ ಮುಖ್ಯ ವೇದಿಕೆಯಲ್ಲಿ ಬಿಎಸ್‌ಜಿ ಮುಖ್ಯ ಆಯುಕ್ತ ಪಿಜಿಆರ್ ಸಿಂಧಿಯಾ ಅವರ ಸಮ್ಮುಖದಲ್ಲಿ ಕೇಕ್ ಕತ್ತರಿಸುವ ಮೂಲಕ ಸಂಭ್ರಮಪಟ್ಟರು

# VIEWING JAMBORETTE THROUGH THE LENS



## SEED BALL MAKING







## SUB CAMP

## HIKE & COMMUNITY SERVICE









## FOREST TRAIL





## SDG HUB









Serving as the Community Health Officer at the Scout and Guide camp was a truly fulfilling experience. Our team provided care to over 250 patients, handling common ailments efficiently. The well-organized setup and the enthusiastic support of Service Rovers and Rangers enabled us to deliver smooth and effective healthcare while ensuring a safe and vibrant camp atmosphere..

**Sandhya Ravi Nayak**
Jamborette Hospital,
Community Health Officer, Vantamuri Rural Primary Health Centre



The jamborette was a meaningful and memorable experience. It provided an excellent platform for Scouts and Guides from different districts to interact and learn values such as discipline, cooperation, leadership, and social responsibility. The well-organized arrangements, diverse activities, and strong spirit of service made the event truly special and inspiring for the youth.

**Sri Ranganath**
District Fire Officer, Belagavi



ಜಾಂಬೋರೇಟ್‌ನಲ್ಲಿ ಅಡುಗೆ ಮಾಡುವ ಅವಕಾಶ ನನಗೆ ಅತ್ಯಂತ ಸಂತೋಷ ಮತ್ತು ಹೆಮ್ಮೆಯನ್ನು ನೀಡಿತು. ಅಡುಗೆಮನೆ ಸ್ವಚ್ಛತೆ, ಶಿಸ್ತು ಮತ್ತು ಸಮಯಪಾಲನೆಗೆ ಹೆಚ್ಚಿನ ಮಹತ್ವ ನೀಡಿ, ಭಾಗವಹಿಸಿದ ಎಲ್ಲ ಸ್ಕೌಟ್-ಗೈಡ್‌ಗಳಿಗೆ ಪೌಷ್ಟಿಕ ಹಾಗೂ ಸುರಕ್ಷಿತ ಆಹಾರವನ್ನು ಒದಗಿಸಲು ನಾವು ತಂಡವಾಗಿ ಶ್ರಮಿಸಿದ್ದೇವೆ. ಉತ್ತಮ ಸಹಕಾರ ಮತ್ತು ವ್ಯವಸ್ಥಿತ ನಿರ್ವಹಣೆಯಿಂದ ಅಡುಗೆಮನೆ ಸುಗಮವಾಗಿ ಕಾರ್ಯನಿರ್ವಹಿಸುತ್ತಿದೆ.

**ಭಾರತಿ**
ಜಾಂಬುರೇಟ್ ಅಡುಗೆಮನೆ ಸದಸ್ಯೆ






ಜಾಂಬೋರೇಟ್‌ನ ಭಾಗವಾಗಿರುವುದು ನನಗೆ ಮೊದಲ ಅನುಭವ. ಇಂತಹ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು ತುಂಬಾ ಖುಷಿ ಆಯಿತು. ಇಲ್ಲಿ ನಡೆಯುತ್ತಿರುವ ಎಲ್ಲಾ ಚಟುವಟಿಕೆಗಳು ತುಂಬಾ ಚೆನ್ನಾಗಿವೆ. ಮಕ್ಕಳು ಬಹಳಷ್ಟು ಖುಷಿಯಿಂದ ಹಾಗೂ ಲವಲವಿಕೆಯಿಂದ ಭಾಗವಹಿಸುತ್ತಿದ್ದಾರೆ . ಇದನ್ನೆಲ್ಲ ನೋಡಿದಾಗ ಇನ್ನಷ್ಟು ಸಂತೋಷವಾಗುತ್ತದೆ. ಒಟ್ಟಾರೆ ಇದು ನನಗೆ ಮರೆಯಲಾಗದ ಅನುಭವ.

**ಸಂದೀಪ್**
ಅಂಬ್ಯುಲೆನ್ಸ್ ಚಾಲಕ ಕೇದನೂರು



Being part of the 29th State Jamborette at Belagavi was an amazing experience. The activities, discipline, and connection with nature made the camp truly special. Meeting Scouts and Guides from across Karnataka, learning new skills, and working together as a team helped us grow with confidence and responsibility. This Jamborette will always remain a memorable experience for us.

Ume Kulsum
Service Rangers, Chikkamagaluru



The Jamborette has been planned and executed in a meticulous manner which is commendable. From diverse activities to nutritious meals, everything has chalked down to be perfect, making this a stupendous event to be remembered for the time to come. The jamborette kit that has made available is stupendous and assisting the conduction of this event is indeed an honour.

Janardhan Chakravarthi
Bengaluru South

## ಕುಂದಾನಗರಿ ಜಾಂಬೋರೇಟ್

ಜಯವಾಗಲಿ, ಜಯವಾಗಲಿ, ಜಯವಾಗಲಿ |
29ನೇ ಜಾಂಬೋರೇಟ್‌ಗೆ ಜಯವಾಗಲಿ |
ಕುಂದಾನಗರಿ ಬೆಳಗಾವಿಗೆ ಜಯವಾಗಲಿ |
ಭಾರತ ಸ್ಕೌಟ್ ಗೈಡ್ ಮಕ್ಕಳಿಗೆ ಜಯವಾಗಲಿ ||

ನೋವನ್ನು ಮರೆತು ನಲಿವಿನಲ್ಲಿ ಬೆರೆತು |
ಜಾಂಬೋರೇಟ್‌ನ ಸಂಭ್ರಮದಲ್ಲಿ ಒಂದಾಗುತ್ತ |
ಸಂತಸ - ಸಡಗರ ಸಂಭ್ರಮವು ಬಿರುತ್ತಾ |
ನಲಿ- ನಲಿಯುತ್ತಾ, ಕಲಿ- ಕಲಿಯುತ್ತಾ ಸಾಗೋಣ ||

ಸಾಹಸ ಕ್ರೀಡೆ , ಗ್ಲೋಬಲ್ ವ್ಯಾಲಿ |
ಮೋಜು ಮಸ್ತಿ , ಸ್ಕಿಲ್ಲೋ ರಾಮಾ |
ಕಾಲುನಡಿಗೆ, ಹೆಜ್ಜೆ ಗುರುತು |

ಜ್ಞಾನದ ದೀಪ ಹತ್ತಿತ್ತು ಬೆಳಗಿತ್ತು ||
ವಿಧ-ವಿಧ ಹೂಗಳು ಪರಿಮಳ ಒಂದೇ
ಬಗೆ - ಬಗೆ ಮಕ್ಕಳು ಗುರಿಯು ಒಂದೇ
ವಿಧ-ವಿಧ ಜಾತಿಯ ಧರ್ಮವು ಒಂದೇ
ಇಲ್ಲಿ ಪಡೆಯುವೆವು ಜ್ಞಾನವು ಒಂದೇ ಒಂದೇ ||

ದೇಶವು ಸುತ್ತುತ್ತಾ ಕೋಶವು ಓದುತ್ತ |
ಸ್ಕೌಟ್ಸ್- ಗೈಡ್ಸ್ ಸಮ್ಮೇಳನ ನೋಡುತ್ತಾ |
ದೇಶ - ದೇಶ ಖಂಡ - ಖಂಡದಲ್ಲಿ
ವಿಶ್ವವ ಅರಿಯುತ |
ಜ್ಞಾನ ಜ್ಯೋತಿಯ ಜಗಕ್ಕೆ ಬೆಳಗುತ್ತ ||

ಗೆಲವು ಪಡೆಯುತ್ತಾ ನಗೆಯನ್ನು ಬೀರುತ |

ನಮ್ಮಯ ನಾಡಿನ ಕೀರ್ತಿಯ ಸಾರುತ್ತಾ |
ನಡೆ ನಡೆಯುತ್ತಾ ಮುನ್ನಡೆಯುತ್ತಾ ನಾವು ಸಾಗುತ್ತಾ |
ಬೆಳಗಾವಿ ನಗರಕ್ಕೆ ವಂದನೆ ಹೇಳುತ್ತಾ ||

ಪಿ.ಜಿ.ಆರ್. ಸಿಂಧೀಯಾಜೀ ರವರ ನೇತೃತ್ವದಲ್ಲಿ |
ಗಜಾನನ ಮಣ್ಣಿಕೇರಿಜೀ ರವರ ಮುಂದಾಳತ್ವದಲ್ಲಿ |
ಪ್ರಕಾಶಿಸುತ್ತಿದೆ ಕುಂದಾನಗರದಲ್ಲಿ ಜಾಂಬೋರೇಟ್ |

**ಶಂಕ್ರಪ್ಪ ಭಜಂತ್ರಿ**
**ನೀಡಗುಂದಿ, ವಿಜಯಪುರ**



# Today's Schedule

| | |
|---|---|
| 06:00 AM | Rouse |
| 07:00 AM | Yoga |
| 09:00 AM - 1 PM | Module Activities:<br>1. Adventure Valley<br>2. Hike and community service<br>3. Scout skillo Sustainable<br>4. SDG HUB<br>5. Exhibition organized by various departments & Districts<br>6. Educational tour<br>7. Forest Trail<br>8. Fun in Farm<br>9. Scout Skillo |
| 11.00 A.M. | Contingent Leaders Meeting |
| 01:00 PM | Lunch |
| 02:30- 04:30 PM | Sub Camp Time and Integration Game |
| 04:30 - 07:00 | Closing Ceremony |
| 07:30 PM | Dinner |
| 09:00 PM | Ethnic Fashion Show |
| 11:00 PM | Music Concert |
| 11:50 PM | Message by State Chief Commissioner |
| 11:59 PM | Countdown to New Year |
| 12:00 AM | 2026 New Year Celebration - Cake Cutting |
| 12:15 AM | Concert Ends; Participants Departs |
| 12:30 AM | Lights Off |

## WEATHER REPORT

Day 12/31

30° Hi

RealFeel® 32°

RealFeel Shade™ 29°

Sunshine

| | | | |
|---|---|---|---|
| Max UV Index | 6.0 (High) | Probability of Precipitation | 0% |
| AccuLumen Brightness Index™ | 9 (Very Bright) | Probability of Thunderstorms | 0% |
| Wind | SE 7 km/h | Precipitation | 0.0 mm |
| Wind Gusts | 26 km/h | Cloud Cover | 10% |

## ACTIVITY CHECKER

| Activity Name | No. of Participants |
|---|---|
| SDG Hub | 700 |
| Adventure Valley | 1273 |
| Forest Trail | 231 |
| Fun in Farm | 120 |
| Fun Base | 730 |
| Scout Skillo | 857 |
| Hike | 568 |
| Educational Tour (VTU) | 541 |
| Educational Tour Suvarna Soudha | 425 |

## WHAT'S UP FOR TODAY?







